ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 5 ಚಾ ಸಾ 6

ಹೆಸರುಃ ಮನು

ತಂದೆಯ ಹೆಸರುಃ ಕುಮಾರ್

ವಯಸ್ಸುಃ 29 ವರ್ಷ

ಉದ್ಯೋಗಃ ಚಿಕನ್ ಅಂಗಡಿಯಲ್ಲಿ ವ್ಯಾಪಾರ

ವಾಸಃ ಬೆಲವತ್ತಮಂಟಿ, ಮೈಸೂರು.

ದಿಃ 23.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನಾನು ಬೆಲವತ್ತಮಂಟಿ ಗ್ರಾಮಕ್ಕೆ ಬಂದು 15 ವರ್ಷ ಆಯಿತು. ನನ್ನ ತಂದೆಗೆ ನಾನು ಮತ್ತು ಶಶಿಕುಮಾರ್ ಎಂಬಿಬ್ಬರು ಮಕ್ಕಳು.

2. ಬೆಲವತ್ತಮಂಟಿಯ ಹರೀಶ್ ನನಗೆ ಗೊತ್ತು. ಸದರಿ ಹರೀಶ್ ರವರು Sunrise Chiken Centre ಎಂಬ

ಹೆಸರಿನಡಿ ಬೆಲವತ್ತಮಂಟಿಯ ಆಯುರ್ವೇದ ಆಸ್ಪತ್ರೆಯ ಬಳಿ ಚಿಕನ್ ಅಂಗಡಿಯನ್ನು ಇಟ್ಟುಕೊಂಡಿದ್ದರು. ಅವರು ಉದ್ಯೋಗ ನಿಮಿತ್ತ ಬಾಂಗ್ಲಾ ದೇಶ ಕ್ಕೆ ಹೋದ ಕಾರಣಕ್ಕಾಗಿ ಅಂಗಡಿಯನ್ನು ನನಗೆ ವಹಿಸಿಕೊಟ್ಟಿದ್ದರು. ಕಳೆದ ನಾಲ್ಕು ವರ್ಷದಿಂದ ನಾನು ಸದರಿ ಅಂಗಡಿಯನ್ನು ನೋಡಿಕೊಳ್ಳುತ್ತಿದ್ದೇನೆ.

3. ಈ ದಿವಸ ನ್ಯಾಯಾಲಯದ ಮುಂದಿರುವ ಆರೋಪಿ ಲಕ್ಷ್ಮಿ ನನಗೆ ಗೊತ್ತಿರುತ್ತಾಳೆ.

4. 2021 ರ ಡಿಸೆಂಬರ್ ನಿಂದ ಆರೋಪಿ ಲಕ್ಷ್ಮಿ ಚಿಕನ್ ಖರೀದಿಸುವ ಸಲುವಾಗಿ ನನ್ನ ಅಂಗಡಿಗೆ ಬರುತ್ತಿದ್ದಳು. ಆ ರೀತಿ ನಮ್ಮ ಅಂಗಡಿಗೆ ಬರುತ್ತಿದ್ದ ಲಕ್ಷ್ಮಿ ತನಗೆ ಚಿಕನ್ ತಲೆ, ಕಾಲು ಮತ್ತು ಕತ್ತು ಬೇಕು ಎಂದು ಹೇಳಿ ತೆಗೆದುಕೊಂಡು ಹೋಗುತ್ತಿದ್ದಳು. ಆಕೆ ತನ್ನ ಮೊಬೈಲ್ ನಂಬರ್ ಅನ್ನು ನನಗೆ ಕೊಟ್ಟು ಚಿಕನ್ ತಲೆ, ಕಾಲು ಮತ್ತು ಕತ್ತು ಮಿಕ್ಕಿದಾಗ ನನಗೆ ಫೋನ್ ಮಾಡಿ ಎಂದು ನನಗೆ ಹೇಳಿದ್ದಳು. ಆ ರೀತಿ ಚಿಕನ್ ತಲೆ, ಕಾಲು ಮತ್ತು ಕತ್ತು ಮಿಕ್ಕಿದ್ದರೆ ನಾನು ಆರೋಪಿ ಲಕ್ಷ್ಮಿಗೆ ಫೋನ್ ಮಾಡುತ್ತಿದ್ದೆ, ಆಕೆ ಬಂದು ತೆಗೆದುಕೊಂಡು ಹೋಗುತ್ತಿದ್ದಳು.

5. ದಿಃ 05.02.2022 ರಂದು ಬೆಳಿಗ್ಗೆ 10 ಗಂಟೆಗೆ ಲಕ್ಷ್ಮಿ ನನ್ನ ಅಂಗಡಿಗೆ ಬಂದು ಕೆ.ಆರ್. ಎಸ್ ನಲ್ಲಿ ಜಾತ್ರೆ ಇದೆ ,

ಮಟನ್ ಕಟ್ ಮಾಡಬೇಕು, ಅದಕ್ಕಾಗಿ ನಿಮ್ಮ ಬಳಿ ಇರುವ ಮಚ್ಚನ್ನು ಕೊಡಿ ಎಂದು ಕೇಳಿದಳು. ಆಗ ನಾನು ಮಚ್ಚು ಕೊಡಲು ಆಗುವುದಿಲ್ಲ, ನನಗೆ ವ್ಯಾಪಾರಕ್ಕೆ ಬೇಕು ಎಂದು ಹೇಳಿದೆ.

6. ಆಕೆ ನನ್ನ ಅಂಗಡಿಯಿಂದ ಹೊರಟು ಹೋದಳು. ಒಂದು ಗಂಟೆ ಬಿಟ್ಟು ಆಕೆಯಿಂದ ನನಗೆ ಪುನಃ ಫೋನ್ ಬಂತು. ಆ ಫೋನ್ ನಲ್ಲಿ ಆಕೆ ದಯವಿಟ್ಟು ಮಚ್ಚು ಕೊಡಿ, ಬೇಗ ತಂದು ಹಿಂತಿರುಗಿಸುತ್ತೇನೆ ಎಂದು ಹೇಳಿದಳು. ಆಕೆ ಅಷ್ಟೊಂದು ಕೇಳಿಕೊಂಡಳು ಎಂಬ ಕಾರಣಕ್ಕಾಗಿ ನಾನು ಬನ್ನಿ ಮಚ್ಚು ಕೊಡುತ್ತೇನೆ ಎಂದು ಹೇಳಿದೆ.

7. ಆನಂತರ ಬೆಳಿಗ್ಗೆ 11-30 ಗಂಟೆಗೆ ಲಕ್ಷ್ಮಿ ನನ್ನ ಅಂಗಡಿಗೆ ಬಂದಳು. ನನ್ನ ಕೋಳಿ ಅಂಗಡಿಯಲ್ಲಿ ಎರಡು ಮಚ್ಚುಗಳಿದ್ದವು. ಅವುಗಳ ಪೈಕಿ ಒಂದು ಮಚ್ಚನ್ನು ನಾನು ಲಕ್ಷ್ಮಿಗೆ ಕೊಟ್ಟೆ, ಆಕೆ ತೆಗೆದುಕೊಂಡು ಹೋದಳು.

8. ಸಂಜೆ 7 ಗಂಟೆಯಾದರೂ ಕೂಡ ಲಕ್ಷ್ಮಿ ಮಚ್ಚನ್ನು ತಂದುಕೊಡಲಿಲ್ಲ. ನಾನು 7-15 ಗಂಟೆಗೆ ಆಕೆಯ ಮೊಬೈಲ್ ಗೆ ಫೋನ್ ಮಾಡಿದಾಗ, ಸ್ವಿಚ್ಡ್ ಆಫ್ ಎಂದು ಬಂತು. ಬೆಳಿಗ್ಗೆ ತಂದು ಕೊಡಬಹುದು ಎಂದು ಭಾವಿಸಿ, ಅಂಗಡಿಯನ್ನು ಮುಚ್ಚಿ ಮನೆಗೆ ಹೋಗಿರುತ್ತೇನೆ.

9. ಎಂದಿನಂತೆ ಅಂದರೆ ಭಾನುವಾರ 6ನೇ ತಾರೀಕಿನಂದು ಬೆಳಿಗ್ಗೆ 6 ಗಂಟೆಗೆ ಅಂಗಡಿಯನ್ನು ತೆರೆದು ನಾನು ನನ್ನ ವ್ಯಾಪಾರವನ್ನು ಪ್ರಾರಂಭಿಸಿದ್ದೆ. ಬೆಳಿಗ್ಗೆ ಸುಮಾರು 10 ಗಂಟೆ ಸಮಯದಲ್ಲಿ ಆರೋಪಿ ಲಕ್ಷ್ಮಿ ತಾನು ತೆಗೆದುಕೊಂಡು ಹೋಗಿದ್ದ ಮಚ್ಚನ್ನು ಒಂದು ಕವರ್ ನಲ್ಲಿ ಹಾಕಿಕೊಂಡು ತಂದುಕೊಟ್ಟಳು. ನಾನು ಅದನ್ನು ನೋಡಿದಾಗ ಅದನ್ನು ಉಜ್ಜಿ ತೊಳೆದಂತೆ ಕಂಡು ಬಂತು. ಅದನ್ನು ನನ್ನ ವ್ಯಾಪಾರಕ್ಕೆ ಉಪಯೋಗಿಸದೆ ಪ್ರತ್ಯೇಕವಾಗಿ ಇಟ್ಟಿದ್ದೆ.

10. 8ನೇ ತಾರೀಕಿನಂದು ಡಿ ವೈ ಎಸ್ ಪಿ ರವರು ತಮ್ಮ ತಂಡದೊಂದಿಗೆ ಆರೋಪಿ ಲಕ್ಷ್ಮಿಯನ್ನು ನನ್ನ ಅಂಗಡಿಗೆ ಕರೆದುಕೊಂಡು ಬಂದು ಆಕೆಯನ್ನು ತೋರಿಸಿ ಈಕೆ ನಿಮಗೆ ಗೊತ್ತೇ ಎಂದು ನನ್ನನ್ನು ಕೇಳಿದಾಗ ನಾನು ಗೊತ್ತು ಎಂದು ಹೇಳಿದೆ.

11. ಸದರಿ ಲಕ್ಷ್ಮಿಗೆ ನೀನು ಮಚ್ಚು ಕೊಟ್ಟದ್ದು ನಿಜವಾ ಎಂದು ಕೇಳಿದಾಗ ನಾನು ಹೌದು ಎಂದು ಒಪ್ಪಿ ನಾನು ಲಕ್ಷ್ಮಿಗೆ ಕೊಟ್ಟಿದ್ದ ಪ್ರತ್ಯೇಕವಾಗಿ ಇಟ್ಟಿದ್ದ ಮಚ್ಚನ್ನು ತೆಗೆದು ಡಿ ವೈ ಎಸ್ ಪಿ ರವರ ಮುಂದೆ ಹಾಜರುಪಡಿಸಿದ್ದೇನೆ.

12. ಸದರಿ ಮಚ್ಚನ್ನು ಡಿ ವೈ ಎಸ್ ಪಿ ರವರು ತೆಗೆದುಕೊಂಡು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ, ಸೀಲು ಮಾಡಿ ನನ್ನ ರುಜುವನ್ನು

ಪಡೆದುಕೊಂಡಿರುತ್ತಾರೆ.

13. ಆಗ ನನ್ನ ಅಂಗಡಿಯಲ್ಲಿ ಡಿ ವೈ ಎಸ್ ಪಿ ರವರು ಬರವಣಿಗೆ ಮಾಡಿ ನನ್ನ ರುಜು ಪಡೆದುಕೊಂಡಿರುತ್ತಾರೆ. ಈಗ ನೋಡಿದ ಬರವಣಿಗೆಯಲ್ಲಿ ನನ್ನ ರುಜು ಇದೆ. ಸದರಿ ಬರವಣಿಗೆಯನ್ನು ನಿ ಪಿ 12 ಮತ್ತು ಸಾಕ್ಷಿಯ ರುಜುವನ್ನು ನಿ ಪಿ 12 ಎ ಎಂದು ಗುರುತಿಸಲಾಯಿತು.

14. ಸದರಿ ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ. **(ಈ ಹಂತದಲ್ಲಿ ಮೊಹರು ಮಾಡಲಾದ ಬಿಳಿಯ ಬಟ್ಟೆಯ ಪ್ಯಾಕೆಟ್ ಅನ್ನು ಮಾನ್ಯ ಅಬಿಯೋಜಕರು ಮತ್ತು ಶ್ರೀ ಎಸ್ ಆರ್ ಎಸ್ ವಕೀಲರ ಸಮಕ್ಷಮದಲ್ಲಿ ತೆರೆಯಲಾಯಿತು.)** ನಾನು ಲಕ್ಷ್ಮಿಗೆ ಕೊಟ್ಟು ಆನಂತರ ಡಿ ವೈ ಎಸ್ ಪಿ ರವರು ವಶಪಡಿಸಿಕೊಂಡ ಮಚ್ಚನ್ನು ಈಗ ನೋಡಿದೆ. ಸಾಕ್ಷಿಯು ಗುರುತಿಸಿದ ಮಚ್ಚನ್ನು ಮು. ಮಾಲು 16 ಎಂದು ಗುರುತಿಸಲಾಯಿತು. ಮು. ಮಾಲು 16 ನ್ನು ಇಡಲಾಗಿರುವ ಬಿಳಿಯಬಟ್ಟೆಯ ಚೀಲಕ್ಕೆ ಅಂಟಿಸಲಾಗಿರುವ ಚೀಟಿಯಲ್ಲಿ ನನ್ನ ರುಜು ಇದೆ. ಸದರಿ ಚೀಟಿಯನ್ನು ಮು. ಮಾಲು 16 ಎ ಮತ್ತು ಸಾಕ್ಷಿಯ ರುಜುವನ್ನು ಮು. ಮಾಲು 16 ಬಿ ಎಂದು ನಿಶಾನೆ ಮಾಡಲಾಯಿತು.

15. ಆ ರೀತಿ ಮು. ಮಾಲು 16 ಅನ್ನು ಅಮಾನತ್ತುಪಡಿಸಿಕೊಳ್ಳುವ ಸಂದರ್ಭದಲ್ಲಿ ಪೊಲೀಸರು ಪೋಟೋಗಳನ್ನು

ತೆಗೆದಿರುತ್ತಾರೆ. ಸದರಿ ನಾಲ್ಕು ಪೋಟೋಗಳನ್ನು ಈಗ ನೋಡಿದೆ. ಸಾಕ್ಷಿಯು ಗುರುತಿಸಿದ ನಾಲ್ಕು ಪೋಟೋಗಳನ್ನು ಒಟ್ಟಾಗಿ ನಿ ಪಿ 13 ಎಂದು ಗುರುತಿಸಲಾಯಿತು.

16. ಆನಂತರದಲ್ಲಿ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿದಾಗ ಆರೋಪಿ ಲಕ್ಷ್ಮಿ ತೆಗೆದುಕೊಂಡು ಹೋಗಿದ್ದ ಮಚ್ಚಿನಿಂದ ಐದು ಜನರನ್ನು ಕೊಲೆ ಮಾಡಿದ ವಿಚಾರ ಗೊತ್ತಾಗಿದೆ.

17. ಈ ಸಂಬಂಧವಾಗಿ ನಾನು ಪೊಲೀಸರು ಮತ್ತು ನ್ಯಾಯಾಧೀಶರ ಮುಂದೆ ಹೇಳಿಕೆಗಳನ್ನು ಕೊಟ್ಟಿರುತ್ತೇನೆ.

**ಆರೋಪಿಯ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದ ಕಲಂ 231(2) ರನ್ವಯ ಸಲ್ಲಿಸಲಾದ ಅರ್ಜಿಯಲ್ಲಿ ಮಾಡಿದ ಆದೇಶಕ್ಕನುಗುಣವಾಗಿ ಮುಂದೂಡಿದೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)